ಶ್ರೀ ಗೋವಿಂದ ಎಂ. ಕಾರಜೋಳ್:– ಮಾನ್ಯ ಅಧ್ಯಕ್ಷರೆ, ಈಗ ಸಮಾಜ ಕಲ್ಯಾಣ ಸಚಿವರು ಸದನದಲ್ಲಿಲ್ಲ. ಅವರಿಲ್ಲದೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು:– ಹಾಗಾದರೆ ಒಂದು ಕೆಲಸ ಮಾಡೋಣ. ನಾಳೆ ಹೇಗಿದ್ದರೂ ಸಮಾಜ ಕಲ್ಯಾಣ ಇಲಾಖೆ ಬೇಡಿಕೆ ಮೇಲೆ ಚರ್ಚೆಯಿದೆಯಲ್ಲಾ. ಅದರಲ್ಲಿಯೇ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ್:– ಅದರಲ್ಲಿ ಮಾತನಾಡುವುದಕ್ಕಿಂತ ಈ ವಿಚಾರಕ್ಕೇ ಪ್ರತ್ಯೇಕವಾಗಿ ಚರ್ಚೆ ಮಾಡಲು ಅವಕಾಶ ಕೊಡಿ. ಏಕೆಂದರೆ ಸಮಸ್ಯೆಗಳು ಬೇರೆ ಬೇರೆ ಇವೆ.

ಅಧ್ಯಕ್ಷರು:– ಆಯಿತು. ಈಗ ಉನ್ನತ ಶಿಕ್ಷಣ ಸಚಿವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ. ಉನ್ನತ ಶಿಕ್ಷಣ ಸಚಿವರಾದ ದೇಶಪಾಂಡೆಯವರು ಗೋವಾಕ್ಕೆ ಹೋಗಿದ್ದರು. ಅಲ್ಲಿ ಕನ್ನಡಿಗರ ಮೇಲೆ ಹಲ್ಲೆಯಾಗುತ್ತದೆ ಎನ್ನುವ ಸುದ್ದಿ ತಿಳಿದು, ಸಚಿವರು ಗೋವಾಕ್ಕೆ ಹೋಗಿ ಅವರ ಜೊತೆ ಮಾತನಾಡಿಕೊಂಡು ಬಂದಿದ್ದಾರೆ. ಈಗ ಅವರು ಒಂದು ಹೇಳಿಕೆಯನ್ನು ಕೊಡುತ್ತಾರೆ.

9. ಮಾನ್ಯ ಸಚಿವರ ಹೇಳಿಕೆ

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಎರಡೂ ಸದನದ ಗೌರವಾನ್ವಿತ ಸದಸ್ಯರು ದಿನಾಂಕ 11–07–2014 ರಂದು ಭಾರಿ ಮಳೆಯಲ್ಲಿ ಗೋವಾದ ಬೈನಾ ಬೀಚ್ ವಾಸ್ಕೋ ಸಮೀಪದಲ್ಲಿ 75 ಮನೆಗಳು, ಅದರಲ್ಲಿ ಕನ್ನಡಿಗರ ಮನೆಗಳೂ ಇದ್ದವು, ಉತ್ತರ ಪ್ರದೇಶದ ವಾಸಿಗಳ ಮನೆಗಳು ಇದ್ದವು, ಒಬ್ಬರದ್ದು ಗೋವಾದವರದು ಮನೆಯಿತ್ತು. ಅದನ್ನು ನೆಲಸಮ ಮಾಡಿದ ಬಗ್ಗೆ ಕಳವಳ ವ್ಯಕ್ತಮಾಡಿ ತಕ್ಷಣ ಸರ್ಕಾರ ಗೋವಾ ಸರ್ಕಾರದ ಜೊತೆ ಸಮಾಲೋಚನೆ ಮಾಡಿ ಏಕೆ ಮನೆಗಳು ನೆಲಸಮವಾಯಿತು, ಅವರಿಗೆ ಖಾಯಂ ಸ್ವರೂಪದ ಪುನರ್ವಸತಿ ಮಾಡುವ ಬಗ್ಗೆ ಸರ್ಕಾರ ಒತ್ತಡ ತಂದು ಕನ್ನಡಿಗರಿಗೆ ಒಂದು ಪರಿಹಾರವನ್ನು

ಕಂಡುಹಿಡಿಯಬೇಕೆಂದು ಎರಡೂ ಮನೆಯಲ್ಲಿ ಒತ್ತಾಯವಿತ್ತು. ಅದನ್ನು ನೆಲಸಮ ಮಾಡಿರುವುದರ ಬಗ್ಗೆ ಕಳವಳ ವ್ಯಕ್ತ ಮಾಡಿದ್ದರಿಂದ ತಕ್ಷಣ ನಮ್ಮ ಸರ್ಕಾರ ಗೋವ ಸರ್ಕಾರದ ಜೊತೆ ಸಮಾಲೋಚನೆ ಮಾಡಿ, ಯಾರ ಮನೆಗಳು ನೆಲಸಮವಾಗಿವೆ, ಅವರಿಗೆ ಖಾಯಂ ಸ್ವರೂಪದ ಪುನರ್‌ವಸತಿ ಆಗುವುದರ ಬಗ್ಗೆ ಸರ್ಕಾರ ಮೇಲೆ ಒತ್ತಡ ತಂದು ಕನ್ನಡಿಗರಿಗೆ ಪರಿಹಾರ ಕಂಡುಹಿಡಿಯಬೇಕೆಂದು ಎರಡೂ ಮನೆಯಲ್ಲಿ ಒತ್ತಾಯ ಆಯಿತು. ಆ ಪ್ರಕಾರ ನಿನ್ನೆ ನಮ್ಮ ವಿಧಾನಪರಿಷತ್ತಿನ ಸದಸ್ಯರಾದ ಡಿಸೋಜಾರವರು ಬಂದಿದ್ದರು. ಮುಖ್ಯವಾಗಿ ನಾನು ನಿನ್ನೆ ಗೋವಾಕ್ಕೆ ಹೋದನಂತರ ಬೈನಾ ಬೀಚ್ ವಾಸ್ಕೋದಿಂದ ಒಂದೂವರೆಯಿಂದ ಎರಡು ಕಿಲೋಮೀಟರ್ ಅಂತರದಲ್ಲಿದ್ದು, ಬಹಳ ಸಮೀಪ ಇದೆ. ನಮ್ಮ ಅಧಿಕಾರಿಗಳು ಸಹ ಮುಖ್ಯವಾಗಿ ನಮ್ಮ ಅಡಿಷನಲ್ ಡೆಪ್ಯುಟಿ ಕಮಿಷನರ್, ಉತ್ತರ ಕನ್ನಡ, ತಹಸೀಲ್ದಾರ್ ಎಲ್ಲರನ್ನೂ ಕೂಡ ಕಳುಹಿಸಿಕೊಟ್ಟಿದೆ. ಅವರು ಮುಂಚಿತವಾಗಿ ಹೋಗಿ ಅಲ್ಲಿ ಸ್ಥಳೀಯ ವಾಸ್ಕೋ ಕಲೆಕ್ಟರ್, ಇತರ ಅಧಿಕಾರಿಗಳ ಜೊತೆ ಚರ್ಚೆ ಮಾಡಿದನಂತರ ಅವರು, ನಾವು ಮನೆಗಳನ್ನು demolish ಮಾಡುವುದಕ್ಕಿಂತ ಮೊದಲು ನೋಟಿಸ್ ಕೊಟ್ಟಿದ್ದೇವೆ ಎಂದು ಹೇಳಿದರು. ಇದಕ್ಕೆ ಮೂಲ ಕಾರಣ ಏನೆಂದರೆ Section 5 of Environment Protection Act 1986, Violation of CRZ Regulations. ಅಲ್ಲದೆ ಗೋವಾದಲ್ಲಿ Section 486 ಪ್ರಕಾರ Goa Land Prohibition and Construction Act 1995 ಇದರ ಉಲ್ಲಂಘನೆ ಆಗಿದೆ ಎಂದು ನಾವು ಕ್ರಮ ತೆಗೆದುಕೊಂಡಿದ್ದೇವೆಂದು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರು. ಆದುದರಿಂದ ನಾನು ಸ್ವತಃ ಆ ಸ್ಥಳಕ್ಕೆ ಹೋಗಿ ನಿರಾಶ್ರಿತರ ಜೊತೆ ಚರ್ಚೆಯನ್ನು ಮಾಡಿದೆ. ಅಲ್ಲಿ ಜನ ಬಹಳ ಕಷ್ಟದಲ್ಲಿದ್ದಾರೆ. ಒಂದು ಕಡೆ ಮಳೆ ಬೀಳುತ್ತಿದೆ. ಅಲ್ಲಿ ಮನೆ ಎಂದರೆ ಪಕ್ಕ ಮನೆಗಳಲ್ಲ. ಮನೆಗಳಿಗೆ foundation ಇಲ್ಲ. ಕೆಲವು ಗುಡಿಸಲು ಪ್ರಕಾರ ಇವೆ, ಕೆಲವು ಸಣ್ಣ ಸಣ್ಣ ಶೆಡ್‌ಗಳು ಇವೆ. ಆದರೆ ಅಲ್ಲಿ ಜನ ನಾವು ಇಲ್ಲಿ 30–40 ವರ್ಷದಿಂದ ವಾಸ ಮಾಡುತ್ತಿದ್ದೇವೆ, ಸರ್ಕಾರ ನಮಗೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ, public tapನಿಂದ ನೀರು ಸಿಕ್ಕಿದೆ, ಸಾರ್ವಜನಿಕ ಶೌಚಾಲಯ ಮಾಡಿಕೊಟ್ಟಿದ್ದಾರೆ, Voter listನಲ್ಲಿ ನಮ್ಮ vote

ಇವೆ, Ration Card ಕೊಟ್ಟಿದ್ದಾರೆ ಎಂದು ಹೇಳಿದ್ದರಿಂದ ನಾನು ಅವರ ಜೊತೆ ಸಮಾಲೋಚನೆ ಮಾಡಿ, ನಿಮ್ಮ ಅಂತಿಮವಾದ ಬೇಡಿಕೆ ಏನು ಎಂದು ಕೇಳಿದೆ. ಅದಕ್ಕೆ ಅವರು ನಮಗೆ ಖಾಯಂ ಸ್ವರೂಪದ ಪುನರ್‌ವಸತಿ ವ್ಯವಸ್ಥೆಯಾಗಬೇಕು ಎಂದು ಹೇಳಿದರು. ಅಲ್ಲಿಯ ಸರ್ಕಾರ ನಾಲ್ಕು ಕಡೆ ಸ್ಥಳವನ್ನು ಗುರುತಿಸಿದ್ದು, ಒಂದು ತಿಲಕ್ ಮೈದಾನ ವಾಸ್ಕೋ, ಆ ಸ್ಥಳದಿಂದ 1.5 ಕಿಮೀ ದೂರ ಇದೆ, Bhute Bhat ಕ್ರೀಡಾ ಕಾಂಪ್ಲೆಕ್ಸ್ ಬೈನಾ, ಅದು ಕೂಡ ಒಂದು ಕಿಲೋಮೀಟರ್ ದೂರ ಇದೆ, ಚಿಕಾಲಿಮ್ Sports Complex ಆರು ಕಿಲೋಮೀಟರ್ ದೂರ ಇದೆ, FCI Garden ಅದು 12 ಕಿಮೀ ದೂರ ಇದೆ. ಹಾಗಾಗಿ ಅಲ್ಲಿ ಒಂದು temporary ಆಗಿ ಒಂದು Relief Centre ಮಾಡಿದ್ದರೂ ಕೂಡ ಜನ ಅಲ್ಲಿಗೆ ಹೋಗಿಲ್ಲ. ಏಕೆಂದರೆ ಸರ್ಕಾರ ಏನು ಹೇಳುತ್ತದೆ ಎಂದರೆ Disaster Management ಪ್ರಕಾರ ಕೇವಲ ಏಳು ದಿವಸ ಅಷ್ಟೇ ಆ relief Centreನಲ್ಲಿ ಉಳಿಯಬಹುದು, ಅಲ್ಲಿ ನಿಮಗೆ ಊಟ ತಿಂಡಿ ವ್ಯವಸ್ಥೆ ಮಾಡುತ್ತೇವೆ, ಆದರೆ ನೀವು ಏಳು ದಿವಸದ ನಂತರ ಅಲ್ಲಿಂದ ಹೋಗಬೇಕೆಂದು ಹೇಳಿದ್ದರಿಂದ, ಅಲ್ಲಿ ಹೋಗಿ ಏನೂ ಉಪಯೋಗವಿಲ್ಲವೆಂದು ಜನ ಅಲ್ಲಿ ಹೋಗಿಲ್ಲ. ಅಲ್ಲ ಇನ್ನೂ 500–600 ಮನೆಗಳು ಇವೆ. 2ನೇ ಫೇಸ್‌ನವರಿಗೂ ಕೂಡ ನೋಟಿಸ್ ಕೊಟ್ಟಿದ್ದಾರೆ. ಹಾಗಾಗಿ ಎಲ್ಲಾ ತಿಳಿದುಕೊಂಡ ನಂತರ ನಾನು ಅಲ್ಲಿದ್ದಾಗ ಆಕಸ್ಮಾತ್ತಾಗಿ ಪಂಚಮಶಾಲಿ ಪೀಠದ ಮೃತ್ಯುಂಜಯ ಸ್ವಾಮಿಗಳು ಸಹ ಅಲ್ಲಿದ್ದರು. ಅವರೂ ಸಹ ಅಕ್ಕಿ, ಜೋಳ ಎಲ್ಲಾ distribute ಮಾಡಿದ್ದರು. ನಾನೂ ಕೂಡ ಮಾನ್ಯ ಮೇಟಿ ಮತ್ತು ಕನ್ನಡ ಸಂಘಟನೆಯವರಿಗೆ ಅಕ್ಕಿ, ಜೋಳ ಏನು ಬೇಕು ಕೇಳಿ ಎಲ್ಲಾ ವ್ಯವಸ್ಥೆ ಮಾಡುತ್ತೇವೆಂದು ಹೇಳಿದಾಗ ಅವರು, ಚಿತ್ರಮಠದ ಸ್ವಾಮಿಗಳು ಕೊಟ್ಟಿದ್ದಾರೆ, ಅದನ್ನು ಇಡುವುದಕ್ಕೂ ಜಾಗವಿಲ್ಲ ಎಂದು ಹೇಳಿದರು. ನಂತರ ನಾವು ನೇರವಾಗಿ ಜನರ ಜೊತೆ ಚರ್ಚೆ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅಲ್ಲಿ 15–20 ದಿವಸದ ಹಿಂದೆ ಹುಟ್ಟಿದಂತಹ ಕೂಸುಗಳಿದ್ದವು. ಅವರು ನಾವು ಕೇಳಿದ ಮಾತಿಗೆ ನಮಗೆ ಖಾಯಂ ಸ್ವರೂಪದ ಪುನರ್‌ವಸತಿ ವ್ಯವಸ್ಥೆಯಾಗಬೇಕೆಂದು ಹೇಳಿದರು. ಅದಾದಮೇಲೆ ನಾನು

ಮುಖ್ಯಮಂತ್ರಿಯವರನ್ನು ಭೇಟಿಯಾದೆ. ನನ್ನ ಜೊತೆ ಪೂಜ್ಯ ಸ್ವಾಮೀಜಿಯವರು ಬರುತ್ತೇನೆಂದು ಹೇಳಿದರು, ಅವರನ್ನೂ ಸಹ ಕರೆದುಕೊಂಡು ಹೋದೆನು. ಜೊತೆಗೆ ಕನ್ನಡ ಸಂಘಟನೆಯ ಅಧ್ಯಕ್ಷರಾದ ಪಾಟೀಲರು ಮತ್ತು ಮಾನ್ಯ ಮೇಟಿಯವರು ಇದ್ದರು. ಅಲ್ಲಿ ಮೇಟಿಯವರು ಕನ್ನಡಿಗರ ಬಗ್ಗೆ ಸಾಕಷ್ಟು ಕೆಲಸ ಮಾಡುತ್ತಿರುತ್ತಾರೆ. ಗೋವಾ ಸರ್ಕಾರ ಸಹ ಒಂದರಿಂದ ಏಳನೇ ತರಗತಿಯವರೆಗೆ ಕನ್ನಡ ಶಾಲೆ ಪ್ರಾರಂಭ ಮಾಡಿದೆ. ನಾನು ಮಾನ್ಯ ಮುಖಮಂತ್ರಿಯವರನ್ನು ಭೇಟಿಯಾಗುವುದಕ್ಕಿಂತ ಮೊದಲು ವಿರೋಧ ಪಕ್ಷದ ನಾಯಕರಾದಂತಹ ಪ್ರತಾಪ್‌ಸಿಂಗ್ ರಾಣೆಯವರು ಹಾಗೂ ಮಾಜಿ ಮುಖ್ಯಮಂತ್ರಿ ದಿಗಂಬರ್ ಕಾಮತ್‌ರವರನ್ನು ಭೇಟಿಯಾಗಿ, ನಂತರ ಮುಖ್ಯಮಂತ್ರಿಯವರನ್ನು ಭೇಟಿಯಾದಾಗ ಅವರಿಗೆ ನಾನು ಒಂದೇ ಮಾತು ಹೇಳಿದೆ. ಅಲ್ಲಿ ನಾವು ಕನ್ನಡಿಗರು ಮತ್ತು ಗೋವಾದವರು ಎನ್ನುವ ವಾತಾವರಣವನ್ನು ಸೃಷ್ಟಿ ಮಾಡಲು ಅವಕಾಶ ಕೊಡಲಿಲ್ಲ. Humanity approach ನಿಮ್ಮ ಕಡೆ ಇರಬೇಕು. ನೀವು ಮಳೆಗಾಲದಲ್ಲಿ ಮನೆಗಳನ್ನು ಡೆಮಾಲಿಶ್ ಮಾಡಿದರೆ ಜನ ಎಲ್ಲಿಗೆ ಹೋಗಬೇಕು? ಅವರು ತಮ್ಮದೇ ಆದಂತಹ ಕಾರಣವನ್ನು ಕೊಟ್ಟರು. ಈ ವಿಚಾರ ಹೈಕೋರ್ಟಿಗೆ ಹೋಗಿತ್ತು. ಮುಂಬೈ ಹೈಕೋರ್ಟ್‌ನಲ್ಲಿ ಗೋವಾ ಬೆಂಚ್ ಹೋಗಿತ್ತು. ಆದರೆ ಅಲ್ಲಿ ಮನೆಗಳು ಡೆಮಾಲಿಶ್ ಮಾಡಿದ ಮೇಲೆ ಎಂಟು ಮನೆಗಳು ಉಳಿದಿತ್ತು. ಅವರೇ ತಮ್ಮ stay vacate ಮಾಡಿಕೊಂಡಿದ್ದಾರೆ, ಅದಕ್ಕೆ ಸಂಬಂಧಪಟ್ಟ ಪೇಪರ್‌ಗಳು ನನ್ನ ಹತ್ತಿರ ಇವೆ. ನಾನು ಮುಖ್ಯಮಂತ್ರಿಗಳ ಜೊತೆ ಚರ್ಚೆ ಮಾಡುತ್ತಾ ನೀವು Relief Centre ಏಕೆ ಮಾಡಿದರಿ? ಅಲ್ಲಿ ಕೇವಲ ಏಳು ದಿನ ಮಾತ್ರ ಇರಬೇಕೆಂದರೆ ಯಾರು ಹೋಗುತ್ತಾರೆ? ಈಗ ಮಳೆಗಾಲ ಇದೆ. ಕೊನೇ ಪಕ್ಷ ಸೆಪ್ಟೆಂಬರ್‌ತನಕ Relief Campನಲ್ಲಿ ಉಳಿದುಕೊಳ್ಳುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಒಪ್ಪಿಕೊಂಡರು. ಅದಾದಮೇಲೆ ಸೆಪ್ಟೆಂಬರ್ ನಂತರ ಏನು ಮಾಡುವುದೆಂದು ಮತ್ತೊಂದು ವಿಚಾರ ಬಂತು. ಆಗ ಮುಖ್ಯಮಂತ್ರಿಯವರು ಒಂದು ಸಲಹೆಯನ್ನು ನೀಡಿ, ಅವರು rental

buildings ನೋಡಲಿ, ಆ ಬಾಡಿಗೆಯಲ್ಲಿ ಸ್ವಲ್ಪ ಭಾಗ ನಮ್ಮ ಸರ್ಕಾರದಿಂದ ಸಹಾಯ ಮಾಡುತ್ತೇವೆ ಮತ್ತು ಖಾಯಂ ಸ್ವರೂಪದ ಪುನರ್‌ವಸತಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದರು. ಖಾಯಂ ಸ್ವರೂಪದ ಪುನರ್‌ವಸತಿ ವ್ಯವಸ್ಥೆಯನ್ನು ಮಾಡುವುದಕ್ಕೆ ನಾವು land identify ಮಾಡಬೇಕು, ಅದಕ್ಕೆ ಸ್ವಲ್ಪ ವಿಳಂಬವಾಗಬಹುದು ಎಂದು ಹೇಳಿದರು. ಅಲ್ಲಿ ಮನೆ demolish ಮಾಡಿರುವುದರಲ್ಲಿ ಯುಪಿ ಜನ ಕೂಡ ಇದ್ದರು. ಹಾಗಾಗಿ ಮುಖ್ಯಮಂತ್ರಿಗಳು ಸಂಪೂರ್ಣವಾಗಿ ಸಹಕಾರ ಮತ್ತು ಬೆಂಬಲ ಕೊಟ್ಟರು, ಅವರನ್ನು ನಾವು ಅಭಿನಂದಿಸಬೇಕಾಗುತ್ತದೆ. ಕೊನೆಗೆ ನಿರ್ಣಯವಾದಂತೆ ಸೆಪ್ಟೆಂಬರ್ 30ರ ತನಕ ಆ ಜನ Relief Centreನಲ್ಲಿ ವಾಸ ಮಾಡುತ್ತಾರೆ. ಅದರ ಬಗ್ಗೆ ಅವರು ಆಜ್ಞೆ ಮಾಡುವುದಕ್ಕೆ ಹೇಳಿದ್ದಾರೆ. ಅಷ್ಟೇ ಅಲ್ಲ ಅವರು ಆ ಜನರ ಜೊತೆ ಚರ್ಚೆ ಮಾಡುತ್ತೇನೆಂದು ಹೇಳಿದರು. ಆ ಭಾಗದ ಬಿಜೆಪಿ ಎಂಎಲ್‌ಎ, ಪವರ್ ಮಿನಿಸ್ಟರ್‌ರವರು ಇವತ್ತು ಸಂಜೆ 6.30ಕ್ಕೆ ಜನರನ್ನು ಕರೆದುಕೊಂಡು ಬನ್ನಿ, ಅವರ ಜೊತೆ ಚರ್ಚೆ ಮಾಡುತ್ತೇನೆಂದು ಹೇಳಿದರು. ಆ ಜನರಿಗೆ Relief Centreನಲ್ಲಿ ಸೆಪ್ಟೆಂಬರ್ 30ರ ತನಕ ಇರುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಅವರಿಗೆ permanent rehabilitation ಆಗಬೇಕಾದರೆ ಸಹಜವಾಗಿ ಸ್ವಲ್ಪ ಸಮಯ ಬೇಕಾಗುತ್ತದೆ, ಅದನ್ನು ನಾವೂ ಒಪ್ಪಿಕೊಳ್ಳಬೇಕಾಗುತ್ತದೆ. ಹಾಗಾಗಿ ಆ ಜನರು ಬಾಡಿಗೆ ಮನೆ ನೋಡಕೊಳ್ಳಲಿ, ಅದಕ್ಕೆ reasonable ಆಗಿ ಬಾಡಿಗೆ ಏನಿರುತ್ತದೆ, ಅದನ್ನು ಸರ್ಕಾರದಿಂದ ಕೊಡುತ್ತೇವೆ. ಅಲ್ಲಿ ಯಾರು ಐದು ವರ್ಷಕ್ಕಿಂತ ಹೆಚ್ಚಾಗಿ ವಾಸ ಮಾಡುತ್ತಿದ್ದಾರೆ, ಅವರೆಲ್ಲರಿಗೂ ಪುನರ್‌ವಸತಿ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳಿದರು. ನಾವು ಅವರಿಗೆ ಎಚ್ಚರಿಕೆ ಮಾಡಿ, ನೋಡಿ ಇಲ್ಲಿ ಇಷ್ಟೆ ಮನೆಗಳು ಇಲ್ಲ, 600–700 ಮನೆಗಳು ಇವೆ, ಅಲ್ಲಿ ದೇಶದಲ್ಲಿರುವ ಬೇರೆ ಬೇರೆ ರಾಜ್ಯದ ಜನರೂ 25 ರಿಂದ 30 ವರ್ಷದಿಂದ ಇದ್ದಾರೆ, ಅದರಲ್ಲಿ ಕನ್ನಡಿಗರೂ ಕೂಡ ಇದ್ದಾರೆ ಎಂದು ಹೇಳಿದೆವು. ಅಲ್ಲಿ ಸೆಕೆಂಡ್ ಫೇಸ್‌ನಲ್ಲಿ ನೋಟಿಸ್ ಏನು ಕೊಟ್ಟಿದ್ದಾರೆ, ಅದನ್ನು immediately implement ಮಾಡುವುದಿಲ್ಲವೆಂದು ಹೇಳಿದರು. ಅಲ್ಲಿ ಖಾಯಂ ಸ್ವರೂಪ ಪುನರ್‌ವಸತಿ ವ್ಯವಸ್ಥೆಯನ್ನು

ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ನಾನುಈಗಾಗಲೇ ಹೇಳಿದ ಹಾಗೆ ಈಗ temporary relief ಕೊಟ್ಟಿದ್ದಾರೆ. ಹಾಗಾಗಿ ಕನ್ನಡಿಗ ಪ್ರತಿನಿಧಿಗಳು ಕೂಡ ಸಮಾಧಾನ ಪಟ್ಟಿದ್ದಾರೆ. ನಾನು ಈ ಸದನದ ಅಭಿಪ್ರಾಯವನ್ನು ಅವರ ಗಮನಕ್ಕೆ ತೆಗೆದುಕೊಂಡು ಬಂದು ನಾನು ಅವರಿಗೆ ultimately, human approach is more important ಎಂದು ಹೇಳಿದೆ. ಇಲ್ಲಿ ಮುಖ್ಯವಾಗಿ ಯಾವ ರಾಜ್ಯದವರು ಎನ್ನುವುದಕ್ಕಿಂತ ನಾವು ಮಾನವೀಯ ದೃಷ್ಟಿಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಾಗಿದೆ. ಅದಕ್ಕೆ ಅವರು ಒಪ್ಪಿಕೊಂಡು ಸಂಪೂರ್ಣವಾದ ಸಹಕಾರವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆ ಪ್ರಕಾರ ಈ ನಿರ್ಣಯಗಳು ಆಗಿವೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ದೇಶಪಾಂಡೆಯವರೆ, ಅಲ್ಲಿ ಜನ ಈಗ ಬೀದಿಯಲ್ಲೇ ಇದ್ದಾರೆ. ನೀವು ಯಾರ್ಯಾರು ಅಲ್ಲಿಗೆ ಹೋಗಿ ಪರಿಹಾರ ಕೊಟ್ಟರೂ ಸಹ ಆ ಜಾಗದಲ್ಲಿಯೆ ಕುಳಿತಿದ್ದಾರೆ, ಅಲ್ಲಿ ಇನ್ನೂ ಅವರು temporaryಯಾಗಿ shift ಮಾಡಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ:– ನಾಲ್ಕು ದಿನದಿಂದ ಸೆಟ್ಲ್ ಮಾಡಿದರೂ ಅಲ್ಲಿಗೆ ಜನ ಹೋಗುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಏಳು ದಿವಸದ ಮಟ್ಟಿಗೆ ಹೋಗಿ ಅಲ್ಲಿ ನಾವೇನು ಮಾಡುವುದು ಮತ್ತು ನಮಗೆ ಅಲ್ಲಿ minimum facilities ಬೇಕು ಎಂದು ಹೇಳಿದಂತಹ ಸಂದರ್ಭದಲ್ಲಿ ನಾವು ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡಿದಾಗ ಅವರು ಆಗಸ್ಟ್ ತಿಂಗಳವರೆಗೆ ಆ ಜನ ಅಲ್ಲಿ ಇರಲಿ ಎಂದು ಹೇಳಿದರು. ಅದಕ್ಕೆ ನಾನು ಆಗಸ್ಟ್ ತಿಂಗಳು ಎಂದರೆ ಆಗುವುದಿಲ್ಲ, atleast rainy season ಮುಗಿಯಬೇಕು ಎಂದು ಹೇಳಿದ್ದಕ್ಕೆ ಸೆಪ್ಟೆಂಬರ್ ತಿಂಗಳು 30ರವರೆಗೆ Relief Centreನಲ್ಲಿ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ನಾವು ಮೇಟಿಯರಿಗೆ ಆ ಎಲ್ಲಾ ಜನರನ್ನು Relief Centreಗೆ shift ಮಾಡಿಸಿಬಿಡಿ ಎಂದು ಹೇಳಿ ಬಂದಿದ್ದೇವೆ. ಆ Relief Centre ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಅವರೆಲ್ಲಾ ಬಡವರಿದ್ದಾರೆ, ಅವರೆಲ್ಲಾ construction workers ಆಗಿದ್ದಾರೆ. ಕೆಲವರು ಪಾತ್ರೆ ತೊಳೆಯುವ ಹೆಣ್ಣುಮಕ್ಕಳಿದ್ದಾರೆ, ಅವರೆಲ್ಲಾ ಬಹಳ ಬಡವರಿದ್ದಾರೆ. ಹಾಗಾಗಿ

ಅವರನ್ನು temporary relief ಸೆಪ್ಟೆಂಬರ್ ವರೆಗೂ ನೋಡಿಕೊಳ್ಳುವುದಕ್ಕೆ ಒಪ್ಪಿಕೊಂಡಿದ್ದಾರೆ. ಎರಡನೇಯದಾಗಿ, ನಾವು ಒಪ್ಪಿಕೊಳ್ಳಬೇಕಾದರೆ ಅವರು ಏನು ಹೇಳಿದ್ದಾರೆಂದರೆ, ಸೆಪ್ಟೆಂಬರ್ ನಂತರ ಬಾಡಿಗೆಗಳಿಗೆ ಬಿಲ್ಡಿಂಗ್‌ಗಳನ್ನು ನೋಡಲಿ, ಸರ್ಕಾರದಿಂದ reasonable rent contribute ಮಾಡುತ್ತೇವೆಂದು ಹೇಳಿದರು. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ, ಮತ್ತೆ ಅಭಿನಂದಿಸಬೇಕಾಗುತ್ತದೆ. ಮೂರನೆಯದಾಗಿ, ಅವರು permanent relief ಮಾಡಿಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಹಾಗಾಗಿ ಇದೆಲ್ಲಾ ಕ್ರಮೇಣ ಆಗಬಹುದು, ನನ್ನ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಯವರು ನಮಗೆ ಏನು ಭರವಸೆ ಕೊಟ್ಟಿದ್ದಾರೆ, ಅದು ನನ್ನ ದೃಷ್ಟಿಯಿಂದ ತೃಪ್ತಿಯಾಗಬಹುದೆಂದು ನಾನು ಭಾವಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ತಾವು interest ತೆಗೆದುಕೊಂಡು ಅಲ್ಲಿಗೆ ಹೋಗಿ ಮಾಡಿದ್ದೀರಿ, ಅಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಭೇಟಿಯಾಗಿದ್ದು ಒಳ್ಳೆಯದಾಯಿತು. ನಾವು last time zero hourನಲ್ಲಿ raise ಮಾಡಿದಾಗ ತಾವು ಆಗ ಭರವಸೆಯನ್ನು ಕೊಟ್ಟಿದ್ದೀರಿ. ಅದರ ಪ್ರಕಾರ ತಾವು ಸಹ ಅಲ್ಲಿಗೆ ಹೋಗಿ ಬಂದಿದ್ದೀರಿ. ರಾಜ್ಯಸರ್ಕಾರ ಇದರ ಬಗ್ಗೆ ಇನ್ನು ಸ್ವಲ್ಪ intiation ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, almost ಅವರೆಲ್ಲಾ ಬಡವರಿದ್ದಾರೆ, ಮತ್ತೆ ಅದರಲ್ಲಿ ಬಿಜಾಪುರ, ಬಾಗಲಕೋಟೆ, ರಾಯಚೂರು, ಈ ಕಡೆಯಿಂದ ಕೂಲಿ ಕೆಲಸ ಮಾಡುವುದಕ್ಕೆ ಹೋಗಿರುವವರು. ಅವರೆಲ್ಲಾ ಬೀದಿಗೆ ಬಿದ್ದಿದ್ದಾರೆ, ಅವರಿಗೆ ನಾವು ಎಷ್ಟೆ ಪರಿಹಾರವನ್ನು ಕೊಟ್ಟರೂ ಏನೂ ಆಗುವುದಿಲ್ಲ. ಅವರಿಗೆ ಈಗ ಏನು arrangement ಆಗಿದೆಯಲ್ಲಾ, ರಾಜ್ಯಸರ್ಕಾರ ಅದಕ್ಕೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮುತುವರ್ಜಿ ವಹಿಸಿ, ಕಾಲ ಕಾಲಕ್ಕೆ ಸ್ವಲ್ಪ ಸವಲತ್ತುಗಳನ್ನು ನೀಡಿ, ಅವರಿಗೆ permanent ಆಗಿ ಅವರು ಅಲ್ಲೇ ಇರುತ್ತೇವೆಂದರೆ, ತಾವು 5 ವರ್ಷಗಳ condition ಹಾಕಿದ್ದಾರೆಂದು ಹೇಳಿದ್ದೀರಿ. ಅವರಿಗೆ 5 ವರ್ಷಗಳ voter list ನಲ್ಲಿ ಹೆಸರಿರಬೇಕು, ರೇಷನ್ ಕಾರ್ಡ್ ಇರಬೇಕು, ಅವೆಲ್ಲವನ್ನು ನೋಡಿಕೊಂಡು ರಾಜ್ಯಸರ್ಕಾರವು ಅವರ

ಬಗ್ಗೆ ಸ್ವಲ್ಪ ಕಳಕಳಿಯನ್ನು ವ್ಯಕ್ತಪಡಿಸಬೇಕು. ತಮ್ಮ ಕಡೆಯಿಂದಲೂ ಸ್ವಲ್ಪ follow up ಇರಬೇಕೆಂದು ಹೇಳುತ್ತೇನೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ದೇಶಪಾಂಡೆಯವರೆ, ಮಾನ್ಯ ರಾಮಕೃಷ್ಣ ಹೆಗ್ಡೆಯವರಿದ್ದಾಗ ಮುಂಡರಗಾದಲ್ಲಿ ಟಿಬೆಟಿಯನ್ ಕ್ಯಾಂಪ್ ಮಾಡಿದ್ದಾರೆ. ತಾವು ಗೋವಾ ಸರ್ಕಾರಕ್ಕೆ ಒತ್ತಾಯ ಮಾಡಿ, ನಮ್ಮ ಕನ್ನಡಿಗರಿಗೆ ಆ ರೀತಿಯಲ್ಲಿ ಮಾಡುವ ಹಾಗೆ ಹೇಳಿ, ಅವರನ್ನು ಹೊರಗೆ ಹಾಕುತ್ತಾರೆಂದರೆ, ನಾವೆಲ್ಲಾ ಸುಮ್ಮನಿರುವುದಕ್ಕೆ ಆಗುವುದಿಲ್ಲ, ಸರ್ಕಾರ ಏನು ಮಾಡಬೇಕೊ, ಅದನ್ನು ಮಾಡಿ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಸೋಮವಾರದಿಂದ ಕೊಡಗು ಜಿಲ್ಲೆಯಲ್ಲಿ .. .. ..

ಅಧ್ಯಕ್ಷರು:– ಒಂದು ನಿಮಿಷ, ನಾನು ಹೇಳಿಬಿಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ:– ಮಾನ್ಯ ಅಧ್ಯಕ್ಷರೆ, ಇದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದು ಸರಿಯಾಗಿದೆ. ಆ ಬಗ್ಗೆ ನಿರ್ಣಯಗಳು ಏನು ಆಗಿವೆ, ಅವು implement ಆಗಬೇಕಲ್ಲಾ, ಅದು implement ಆಗಬೇಕೆಂದರೆ monitoring ಆಗಬೇಕು, ಸ್ಥಳೀಯ ಕನ್ನಡ ಸಂಘಟನೆಗೂ ಹೇಳಿದ್ದೇನೆ, ಮತ್ತೆ ಬರುವಾಗ Chief Secretaryಗೂ ಹೇಳಿದ್ದೇನೆ. ಅವರ ಲೆವೆಲ್‌ನಲ್ಲಿ ನಮ್ಮ Chief Secretaryಯವರಿಗೂ ಹೇಳಿದ್ದೆ, ಅವರು ಗೋವಾ Chief Secretaryಯವರೊಂದಿಗೆ ಹಿಂದೆ ಮಾತನಾಡಿದ್ದರು, ನಿನ್ನೆ ದಿವಸ ಪುನಃ ಹೋಗಿ ಮಾತನಾಡಿದ್ದಾರೆ. ಅವರಿಗೆ monitoring ಮಾಡುವುದಕ್ಕೆ ಹೇಳಿದ್ದೇನೆ. ಸರ್ಕಾರವೂ ಸಹ monitoring ಮಾಡುತ್ತದೆ.

ಅಧ್ಯಕ್ಷರು:– ಮಾನ್ಯ ಸದಸ್ಯರಲ್ಲಿ ಒಂದು ವಿನಂತಿ ಏನೆಂದರೆ, ಈಗ ನಮ್ಮ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿರುವಂಥ ವಿವಿಧ ಇಲಾಖೆಗಳ ಬೇಡಿಕೆಗಳು ಇದರ ಜೊತೆಗೆ ಹೆಚ್ಚುವರಿ ಬೇಡಿಕೆಗಳಾದ ಮಾನ್ಯ ಮುಖ್ಯಮಂತ್ರಿಯವರ ವ್ಯಾಪ್ತಿಗೆ ಬರುವಂಥ ಆರ್ಥಿಕ, ಸಿಬ್ಬಂದಿ ಮತ್ತು

ಆಡಳಿತ ಸುಧಾರಣೆ, ವಾಣಿಜ್ಯ ಮತ್ತು ಕೈಗಾರಿಕೆ, ಒಳಾಡಳಿತ ಮತ್ತು ಸಾರಿಗೆ, ಯೋಜನೆ, ವಿಜ್ಞಾನ ಮತ್ತು ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ - ಒಟ್ಟು 6 ಬೇಡಿಕೆಗಳಿದ್ದು, ಎಲ್ಲಾ ಬೇಡಿಕೆಗಳು ಇವತ್ತು ಉಳಿದಿರುವ ಭಾಗ ಮತ್ತೆ ನಾಳೆ, ನಾಳಿದ್ದು ಎರಡು ದಿವಸಗಳು ಕೂಡ ಚರ್ಚೆ ಮಾಡುವುದಕ್ಕೆ ಮುಕ್ತವಾದಂಥ ಅವಕಾಶವಿದೆ. ಮಾನ್ಯ ಸದಸ್ಯರು ಯಾವ ಬೇಡಿಕೆ ಮೇಲೆ ಬೇಕಾದರೂ ಮಾತನಾಡುವುದಕ್ಕೆ ಅವಕಾಶವಿದೆ. ಮೊದಲು ಈ ಕಾರ್ಯಕ್ರಮದ ಪಟ್ಟಿಯಲ್ಲಿರುವ ಬೇಡಿಕೆಗಳು ಏನಿವೆ, ಅವುಗಳಿಗೆ ಶುಕ್ರವಾರ, ಶನಿವಾರ ಎಲ್ಲಕ್ಕೂ ಉತ್ತರವನ್ನು ಕೊಟ್ಟು ಬಿಡೋಣ. ಮಾನ್ಯ ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಬೇಡಿಕೆಗಳ ಮೇಲಿನ ಉತ್ತರವನ್ನು ಸೋಮವಾರ ಕೊಡುವುದಕ್ಕೆ ಅವಕಾಶವಿದೆಯೆಂದು ಮಾನ್ಯ ಸದಸ್ಯರುಗಳ ಗಮನಕ್ಕೆ ತರುತಿದ್ದೇನೆ.

10. ಅಧ್ಯಕ್ಷರ ಅಪ್ಪಣೆಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1) ವಿಷಯ: ರಾಜ್ಯದಲ್ಲಿ ಸುರಿಯುತ್ತಿರುವ ಮಳೆಯಿಂದ ಆಗಿರುವ ತೊಂದರೆಗಳ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ಕೊಡಗು ಜಿಲ್ಲೆಯಲ್ಲಿ 15 ದಿವಸಗಳಿಂದ ನಿರಂತರವಾಗಿ ಮಳೆ ಬರುತ್ತಿದ್ದು, ಎಲ್ಲಾ ಅಣೆಕಟ್ಟುಗಳು ತುಂಬಿ, ತಾವೆಲ್ಲರೂ ಸಂತೋಷ ಪಡುವಂಥದ್ದು. ಆದರೆ ಗ್ರಾಮೀಣ ಪ್ರದೇಶದಲ್ಲಿ ಕರೆಂಟ್ ಇಲ್ಲ, ಸನ್ಮಾನ್ಯ ಆಹಾರ ಮತ್ತು ನಾಗರೀಕ ಸಚಿವರಾದ ಮಾನ್ಯ ದಿನೇಶ್ ಗುಂಡೂರಾವ್‌ರವರು ಈ ಕಡೆ ಗಮನ ಹರಿಸಬೇಕೆಂದು ಕೇಳುತ್ತೇನೆ. ಇದನ್ನು immediate ಆಗಿ ರಿಪೇರಿ ಮಾಡುವುದಕ್ಕೂ ಆಗುವುದಿಲ್ಲ. ನಾನು ಮಾನ್ಯ ವಿದ್ಯುತ್ ಸಚಿವರಿಗೆ ಹೇಳಿದ್ದೆ. ಎರಡು ಜೀಪ್ extra ಕೊಡಬೇಕು, line man ಅನ್ನು extra ಕೊಡಬೇಕು ಎಂದು ಹೇಳಿದ್ದೆ. ಇದರ ಜೊತೆಗೆ ಇವತ್ತು APL ಕಾರ್ಡ್‌ದಾರರಿಗೆ ಸೀಮೆಎಣ್ಣೆ ಇಲ್ಲ. ಕೊಡಗು ಜಿಲ್ಲೆಯಲ್ಲಿ ಸಾಮಾನ್ಯವಾಗಿ 4 ತಿಂಗಳು ಹೆಚ್ಚಿಗೆ ಸೀಮೆಎಣ್ಣೆಯನ್ನು ಕೊಡುತ್ತಿದ್ದರು. ಈಗ ತಾವೇ ಆಹಾರ ಸಚಿವರಾಗಿ ಕಳೆದ